# <u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.</u>

**OS No**.231/2019

**PW**:1

**ದಿನಾಂಕ 29.10.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ದಿಃ17.09.2025 ರಂದು ಆದ ಆದೇಶದಂತೆ Pw-1 ರವರ ಪಾಟೀ ಸವಾಲನ್ನು ತೆಗೆದುಕೊಳ್ಳಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎಸ್.ಪಿ.ಪಿ. ವಕೀಲರಿಂದ:</u>**

ಈ ದಾವೆಯನ್ನು ನಾನು ದಾಖಲು ಮಾಡಿರುತ್ತೇನೆ. ನಮ್ಮ ಗುರುಗಳು ನನಗೆ ಈ ದಾವೆ ಮಾಡುವಂತೆ 2019 ನೇ ಇಸವಿಯಲ್ಲಿ ಅಧಿಕಾರ ಪತ್ರವನ್ನು ನೀಡಿರುತ್ತಾರೆ. ಅಧಿಕಾರ ಪತ್ರವನ್ನು ನೀಡಿದ ನಂತರ ನಾನು ಈ ದಾವೆ ಮಾಡಿರುತ್ತೇನೆ. ನಾನು ಸಿದ್ದಾರೂಡ ಮಠ ಆಳೂರ ಮತ್ತು ಪಡನೂರ ಗ್ರಾಮದ ಪೀಠಾಧಿಕಾರಿ ಇರುತ್ತೇನೆ. ಸದರಿ ಮಠಗಳನ್ನು ತೆಗೆದುಕೊಂಡಾಗಿನಿಂದ ಅಂದರೆ ಸುಮಾರು 20 ವರ್ಷಗಳಿಂದ ಸದರಿ ಮಠದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದೇನೆ. ಈ ದಾವೆಗೆ ನಾನೇ ಮಾಹಿತಿ ನೀಡಿರುತ್ತೇನೆ. ವಾದ ಪತ್ರದ ಜೊತೆ ಹಾಥ ನಕಾಶೆಗೆ ನಾನೇ ಮಾಹಿತಿ ನೀಡಿರುತ್ತೇನೆ. ದಾವಾ ಆಸ್ತಿ ಸರ್ವೆ ನಂ.113/4 ಇರುತ್ತದೆ. ವಾದ ಪತ್ರದ ಹಾಥನಕಾಶೆಯಲ್ಲಿ ತೋರಿಸಿರುವ XY ದಾರಿಯು ಸುಮಾರು 50 ವರ್ಷಗಳಿಂದ ಇರುತ್ತದೆ ಎಂದರೆ ಸರಿ. ಸದರಿ XY ದಾರಿಯು ಲಚ್ಯಾಣದಿಂದ ಪಡನೂರ ಗ್ರಾಮಕ್ಕೆ ಹೋಗುತ್ತದೆ. ಸದರಿ XY ದಾರಿಯು ದಕ್ಷಿಣದಿಂದ ಉತ್ತರಕ್ಕೆ ಹೋಗುತ್ತದೆ. ದಾವಾ ಆಸ್ತಿಯನ್ನು ಈಗ್ಗೆ 25 ವರ್ಷಗಳ ಹಿಂದೆ ಖರೀದಿ ಮಾಡಿರಬಹುದು ಆದರೆ ದಿನಾಂಕ ನನಗೆ ಗೊತ್ತಿಲ್ಲ. ನಾನು 29 ಗುಂಟೆ ಖರೀದಿ ಮಾಡಿರುತ್ತೇನೆ. ನಿ.ಪಿ.7 ಮತ್ತು 8 ದಾವಾ ಆಸ್ತಿ ವಿಸ್ತೀರ್ಣ 29 ಗುಂಟೆಗೆ ಸಂಬಂಧಿಸಿದಂತೆ ಇರುತ್ತದೆ. ಸದರಿ ನಿ.ಪಿ.7 ಮತ್ತು 8 ಕ್ಕೆ ನಾನು ಸಹಿ ಮಾಡಿರುತ್ತೇನೆ. ಸರ್ವೆ ನಂ.113/4 ಇದರಲ್ಲಿ 1 ಎಕರೆ 23 ಗುಂಟೆ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾವು 29 ಗುಂಟೆಗೆ ಸಂಬಂಧಿಸಿದಂತೆ ಮಾತ್ರ ದಾವೆ ಮಾಡಿರುತ್ತೇವೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಸರ್ವೆ ನಂ.113/4 ರ ಮೂಲ ಮಾಲೀಕ ಮುಲ್ಲಾ ಇವರು ಇದ್ದರು. ಸದರಿ 1 ಎಕರೆ 23 ಗುಂಟೆಯು ರಸ್ತೆಯ ಪೂರ್ವ ದಿಕ್ಕಿಗೆ ಬರುತ್ತದೆ. ರಸ್ತೆಯ ಪಶ್ಚಿಮ ದಿಕ್ಕಿಗೆ ದಾವಾ ಆಸ್ತಿ ಇರುತ್ತದೆ ಎಂದರೆ ಸರಿ. ಹಾಥ ನಕಾಶೆಯಲ್ಲಿ ರಸ್ತೆಯಿಂದ ಪಶ್ಚಿಮ ದಿಕ್ಕಿಗೆ 19 ಗುಂಟೆ ಜಮೀನು ಇರುತ್ತದೆ. ನೀವು

ರಸ್ತೆಯ ಪಶ್ಚಿಮ ದಿಕ್ಕಿಗೆ ಇರುವ 19 ಗುಂಟೆ ಜಮೀನನ್ನು ಮಾತ್ರ ಖರೀದಿ ಮಾಡಿರುತ್ತಿರೋ ಅಥವಾ 1 ಎಕರೆ 23 ಗುಂಟೆ ಜಮೀನನ್ನು ಖರೀದಿ ಮಾಡಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾವು 29 ಗುಂಟೆ ಜಮೀನನ್ನು ಮಾತ್ರ ಖರೀದಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರದಂತೆ ಸರ್ವೆ ನಂ.113/4 ರ ವಿಸ್ತೀರ್ಣ 1 ಎಕರೆ 23 ಗುಂಟೆಯ ಸಂಪೂರ್ಣ ಮಾಲೀಕರು ನಾವು ಇರುವುದಿಲ್ಲ ಎಂದರೆ ಸರಿ. ಪ್ರತಿವಾದಿಯ ಆಸ್ತಿಯ ಸರ್ವೆ ನಂ.113/3 ವಿಸ್ತೀರ್ಣ 2 ಎಕರೆ 31 ಗುಂಟೆ ಇರುತ್ತದೆ ಎಂದರೆ ಸರಿ. ಸದರಿ ರಸ್ತೆಯ ಪೂರ್ವ ಭಾಗಕ್ಕೆ ಉಳಿದ ಜಮೀನು ಪ್ರತಿವಾದಿಯ ಜಮೀನಿಗೆ ಹೊಂದಿಕೊಂಡಂತೆ ಇರುತ್ತದೆ ಎಂದರೆ ಸರಿ. ಸದರಿ ಉಳಿದ ಜಮೀನಿನ ಸಾಗುವಳಿಯನ್ನು ಪ್ರತಿವಾದಿಯು ಅಂದಿನಿಂದ ಇಂದಿನವರೆಗೂ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸರ್ವೆ ಮಾಡಿಸಲು ನನ್ನದೇನು ತಕರಾರು ಇಲ್ಲ. ರಸ್ತೆಯ ಪೂರ್ವ ಭಾಗಕ್ಕೆ ಪ್ರತಿವಾದಿಯ ಜಮೀನಿಗೆ ಹೊಂದಿಕೊಂಡಂತೆ ಇರುವ ಜಮೀನನ್ನು ಪ್ರತಿವಾದಿಯರು ಕಬ್ಜಾ ವಹಿವಾಟನ್ನು ಮಾಡುತ್ತಿದ್ದರು ಅದು ನಮ್ಮದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪ್ರತಿವಾದಿಯರ ಜಮೀನಿಗೆ ಹೊಂದಿಕೊಂಡಂತೆ ಇರುವ ಜಮೀನಿಗೂ ಮತ್ತು ನಮಗೂ ಯಾವುದೇ ಸಂಬಂಧವಿಲ್ಲದೇ ಇದ್ದರು ಸಹ ಪ್ರತಿವಾದಿಯರಿಗೆ ತೊಂದರೆ ಕೊಡಲು ಈ ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ದಾವೆಯಲ್ಲಿ ಸದರಿ ದಾರಿಯು ಎಷ್ಟು ಅಗಲ ಇರುತ್ತದೆ ಎಂದು ಬರೆದಿಲ್ಲ. ವಾದ ಪತ್ರದಲ್ಲಿ ಸದರಿ XY ದಾರಿಯು 50 ವರ್ಷಗಳಿಂದ ಇರುತ್ತದೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ನಾನು ಮಠದ ಗುರುಗಳು ಇದ್ದು ಪ್ರತಿವಾದಿಯರು ಸದರಿ ಜಮೀನನ್ನು ಸಾಗುವಳಿ ಮಾಡುತ್ತಿರುವುದು ನನಗೆ ಗೊತ್ತಿದ್ದರು ನಾನು ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದ ಪತ್ರದ ಹಾಥನಕಾಶೆಯಲ್ಲಿ ತೋರಿಸಿರುವ 10 ಗುಂಟೆ ಜಮೀನು ತಂಟೆ ಆಸ್ತಿ ಇರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/-

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.